**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.31/2025**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ,

-ಃ ವಿರುದ್ದ ಃ-

ಆರೋಪಿ ನಂಃ 1. ಮುಜಾಮಿಲ್ ತಂದೆ ಶೇಖ ಆಹ್ಮದ
ವಃ 18 ವರ್ಷ, ಉಃ ಕೂಲಿ

2. ಮಹ್ಮದ ಶರೀಫ ತಂದೆ ಶೇಖ ಆಹ್ಮದ
ವಃ 24 ವರ್ಷ, ಉಃ ಡ್ರೈವರ ಕೆಲಸ

3. ಯೂಸೂಫ ತಂದೆ ಶೇಖ ಆಹ್ಮದ
ವಃ 25 ವರ್ಷ, ಉಃ ಟ್ರಾನ್ಸಪೋರ್ಟನಲ್ಲಿ ಕೆಲಸ

4. ಅತೀಯಾ ಬೇಗಂ ಗಂಡ ಶೇಖ ಆಹ್ಮದ
ವಃ 45 ವರ್ಷ, ಉಃ ಮನೆ ಕೆಲಸ

5. ಕುಲಸುಂಬಿ ಗಂಡ ಅಬ್ದುಲ ಮಜೀದ
ವಃ 75ವರ್ಷ, ಉಃ ಮನೆ ಕೆಲಸ
ಎಲ್ಲರೂ ಸಾಃ ಶಾಸ್ತ್ರಿ ನಗರ ಸೇಡಂ
ತಾಃ ಸೇಡಂ, ಜಿಃ ಕಲಬುರಗಿ

----

**ದೋ ಷಾ ರೋ ಪ ಣೆ**

ನಾನು **ಶ್ರೀ ಬಾಲು**, ಬಿಎ.,ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 07-09-2023 ರಂದು ಬೆಳಿಗ್ಗೆ 10-00 ಗಂಟೆ ಸುಮಾರಿಗೆ ಸೇಡಂ ಪೋಲೀಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಸೇಡಂ ಪಟ್ಟಣದ ಶಾಸ್ತ್ರೀ ನಗರ ಸೇಡಂದ ಫಿರ್ಯಾದಿ ಗಂಡನ ಮನೆಯ ಚತ್ತಿನ ಮೇಲೆ ಚಾಸಾ.1 ನೇದ್ದವರು ಬಟ್ಟೆ ತೊಳೆದು ಅವುಗಳನ್ನು ಒಣಗಿಸಲು ಮನೆಯ ಚತ್ತಿನ ಮೇಲೆ ಹಾಕುತ್ತಿರುವಾಗ ಆರೋಪಿತರು ಅಕ್ರಮಕೂಟ ರಚಿಸಿಕೊಂಡು ಬಂದು ಅವರಲ್ಲಿಯ ಆರೋಪಿ.4 ನೇದ್ದವಳು ಚಾಸಾ.1 ನೇದ್ದವಳಿಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಾ ಜಗಳ ತೆಗೆದು, ಸಾರ್ವಜನಿಕ ಶಾಂತಿ ಭಂಗ ಉಂಟುಮಾಡಿರುತ್ತಾರೆ ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 143, 147, 148 ಸಹ ಕಲಂ 149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು, ಆರೋಪಿ. 4 ನೇದ್ದವಳು ಚಾಸಾ.1 ನೇದ್ದವಳ ಕೂದಲು ಹಿಡಿದು ಕೈಯಿಂದ ಬೆನ್ನಿಗೆ ಹೊಟ್ಟೆಗೆ ಹೊಡೆದು ಗುಪ್ತಗಾಯ ಪಡಿಸಿದ್ದು ಇರುತ್ತದೆ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 323 ಸಹವಾಚಕ ಕಲಂ 149ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು, ಆರೋಪಿ.1 ನೇದ್ದವನು ಛತ್ತ ಮೇಲೆ ಬಿದ್ದ ಬಡಿಗೆಯನ್ನು ತೆಗೆದುಕೊಂಡು ಬಲ ಪಕ್ಕೆಲೂಬಿಗೆ ಹೊಡೆದು ಗುಪ್ತಗಾಯ ಪಡಿಸಿರುತ್ತಾನೆ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 324 ಸಹವಾಚಕ ಕಲಂ 149ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ನಡೆದಿರುವುದು ಇರುತ್ತದೆ.

ನಾಲ್ಕನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ಅವರಲ್ಲಿಯ ಆರೋಪಿ.4 ನೇದ್ದವಳು ಬಂದು "ಏ ರಾಂಡ ಯಾಹ ಛತ್ತ ಪೇ ಕ್ಯೂ ವ ಕಪಡೆ ಸುಕಾನಿ ಡಾಲರೆ ಅಂತಾ ಜಗಳಕ್ಕೆ ಬಿದ್ದು"ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.504 ಸಹವಾಚಕ ಕಲಂ 149ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು, ಆರೋಪಿ.2,.,5 ರವರು ಕೂಡಿ ಏ ರಾಂಡ ಕೂ ಮತ್ ಚೋಡೊ ಜಾನ ಸೇ ಮಾರ ಡಾಲೋ ಅಂತಾ ಜೀವದ ಭಯ ಹಾಕಿದ್ದು, ನೀವು ಭಾ.ದಂ.ಸಂ.ಕಲಂ 506 ಸಹವಾಚಕ ಕಲಂ 149ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 13-08-2025 ಪ್ರ.ದ.ನ್ಯಾ.ದಂ. ಸೇಡಂ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.31/2025**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ,

-ಃಃ ವಿರುದ್ಧ ಃಃ-

ಆರೋಪಿ ನಂಃ 1. ಮುಜಾಮಿಲ್ ತಂದೆ ಶೇಖ ಅಹ್ಮದ
ವಃ 18 ವರ್ಷ, ಉಃ ಕೂಲಿ
ಸಾಃ ಶಾಸ್ತ್ರಿ ನಗರ ಸೇಡಂ
ತಾಃ ಸೇಡಂ, ಜಿಃ ಕಲಬುರಗಿ ಹಾಗೂ ಇತರರು .

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ- ಆ-1

ಆ-2

ಆ-3

ಆ-4

ಆ-5

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ- ಆ-1

ಆ-2

ಆ-3

ಆ-4

ಆ-5

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ 13-08-2025 ಪ್ರ.ದ.ನ್ಯಾ.ದಂ. ಸೇಡಂ.